60. ಕರ್ನಾಟಕ ರಾಜ್ಯ ಟೆಕ್ಸ್‌ಟೈಲ್ಸ್ ಪ್ರೈವೇಟ್ ನಿಯಮಿತ
Karnataka State Textiles Pvt. Limited

61. ಕರ್ನಾಟಕ ಟಂಗ್‌ಸ್ಟನ್ ಮೋಲಿ ನಿಯಮಿತ
Karnataka Tungsten Moly Limited

62. ಕರ್ನಾಟಕ ರಾಜ್ಯ ಹಣಕಾಸು ನಿಗಮ
Karnataka State Finance Corporation

63. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
Karnataka State Road Transport Corporation

64. ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ
Karnataka State Warehousing Corporation

65. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ
Karnataka Electricity Board

66. ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ನಿಯಮಿತ
Mysore Acetate & Chemicals Company Limited

67. ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿಯಮಿತ
Karnataka Agro Proteins Limited

68. ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ
Mysore Lamp Works Limited

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿರುವ ಮದ್ಯದಂಗಡಿಗಳು

81 (278) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) 1992 ನೇ ನವೆಂಬರ್ ಅಂತ್ಯದೊಳಗೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು ಎಷ್ಟು ಚಿಲ್ಲರೆ ಮದ್ಯದಂಗಡಿ ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಕೊಡಲಾಗಿದೆ;

ಬಿ) ಇವುಗಳಲ್ಲಿ 1991 ಜನವರಿಯಿಂದ ಎಷ್ಟು ತೆರೆಯಲಾಗಿದೆ;

ಸಿ) ಈ ಕ್ಷೇತ್ರದಲ್ಲಿ ಎಷ್ಟು ಮದ್ಯದಂಗಡಿಯನ್ನು ರದ್ದುಪಡಿಸಲು ಆಕ್ಷೇಪಣೆಗಳು ಬಂದಿರುತ್ತವೆ;

ಡಿ) ಇವುಗಳಲ್ಲಿ ಎಷ್ಟು ಮದ್ಯದಂಗಡಿಗಳನ್ನು ಮುಚ್ಚಲಾಗಿದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಚಿಲ್ಲರೆ ಮದ್ಯದಂಗಡಿ (ಸಿಎಲ್ – 2) – 38
ಬಾರ್ ಅಂಡ್ ರೆಸ್ಟೋರೆಂಟ್ (ಸಿಎಲ್ – 9) – 25
63

ಆ) ವೈನ್ ಸ್ಟೋರ್ಸ್ – 7
ಬಾರ್ ಅಂಡ್ ರೆಸ್ಟೋರೆಂಟ್ – 8
15

ಇ) ನಾಲ್ಕು ಮದ್ಯದಂಗಡಿಗಳ ಬಗ್ಗೆ

ಈ) ಇಲ್ಲ

ಸೇಡಂ ಕ್ಷೇತ್ರದ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಕೊರತೆ.

82 (511) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯುಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಆಲ್ಲೂರು (ಬಿ)ನಲ್ಲಿ 1ರಿಂದ 7ನೇ ತರಗತಿಯವರೆಗಿನ ಶಾಲೆಗೆ ಕೇವಲ ಒಬ್ಬ ಶಿಕ್ಷಕ ಹಾಗೂ ಒಂದು ಕೊಠಡಿ ಮಾತ್ರ ಇದ್ದರೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದಿಲ್ಲವೆ;

ಇ) ಈ ವ್ಯವಸ್ಥೆಯು ಎಷ್ಟು ವರ್ಷಗಳಿಂದ ನಡೆಯುತ್ತಾ ಬಂದಿದೆ;

ಈ) ಇದನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ;

ಉ) ಶಾಲೆಗಳ ವ್ಯವಸ್ಥೆ ಸರಿಯಾಗಿ ಮಾಡಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಸರಿಯಾಗಿ ನಡೆಯುವಂತೆ ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಈ ಶಾಲೆಯಲ್ಲಿ ಇಬ್ಬರು ಉಪಾಧ್ಯಾಯರು ಮತ್ತು ಮೂರು ಕೊಠಡಿಗಳು ಇರುತ್ತವೆ.

ಇ) ನಾಲ್ಕು ಐದು ವರ್ಷಗಳಿಂದ

ಈ) ಅಂತಹ ಶಾಲೆಗಳಿಗೆ ಹೆಚ್ಚಿನ ಉಪಾಧ್ಯಾಯರನ್ನು ನಿಯೋಜನೆ ಮಾಡಲಾಗಿದೆ.

ಉ) ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು, ಗುಲ್ಬರ್ಗಾ, ಇವರಿಗೆ ಹೆಚ್ಚಿನ ಶಿಕ್ಷಕರನ್ನು ನಿಯೋಜಿಸಲು ನಿರ್ದೇಶನ ನೀಡಿದೆ.

ಸೇಡಂ ಪಟ್ಟಣ ಸರ್ವೆ ನಂ 31/1ರಲ್ಲಿ ಕೈಗಾರಿಕಾ ಮಳಿಗೆಗಳು.

85(303) ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಪಟ್ಟಣದ ಸಮೀಪ ಸ.ನಂ. 31:1 16 ಎಕರೆ 26 ಗುಂಟೆ ಜಮೀನನ್ನು ಕೈಗಾರಿಕಾ ವಸಾಹತಿಗಾಗಿ ತೆಗೆದುಕೊಂಡು 3–4 ವರ್ಷಗಳಾದರೂ ಸಹ ಯಾವ